1	2	3	4	5
2)	180	1-00	ಮಹಿಮಕ್ಕ	ಕುರಿಜಾಲಪ್ಪ
3)	180	1-00	ಮುದಿಮಲ್ಲಯ್ಯ	ಕರಿಯಪ್ಪ
4)	180	1-00	ಜನ್ನಿಗಪ್ಪ	ಓಬಳಪ್ಪ
5)	180	1-00	ಸೈಯದ್ ಯಾಕೊಜಾನ್	ಸಾಬ್‌ಜಾನ್‌ಸಾಬ್
6)	180	1-00	ಲಕ್ಷ್ಮಮ್ಮ	ಲಗುಮಯ್ಯ
7)	180	1-00	ಅಮೀರ್‌ಖಾನ್	ಪೀರ್‌ಸಾಬ್
8)	180	1-00	ತಿಮ್ಮಯ್ಯ	ತಿರುಮಲಯ್ಯ
9)	180	1-00	ಮದರ್‌ಖಾನ್	ಬೂರ್‌ಖಾನ್
10)	180	1-00	ಹೋಬಿಜಾನ್	ಪತ್ತರ್‌ಸಾಬ್
11)	180	1-00	ಮೋಟಾಸಾಬ್	ಇಮಾಮ್ ಸಾಬ್
12)	180	1-00	ಅಮೀರ್ ಸಾಬ್	ಅಮೀರ್‌ಸಾಬ್
13)	180	1-00	ಮುನಿಹನುಮಯ್ಯ	ತಿಮ್ಮಯ್ಯ
14)	180	2-00	ಕೆ.ಪಿ. ಶಣ್ಮುಗಂ	ಪ್ಯಾರುನಲ್
15)	180	1-00	ಚೂಡಯ್ಯ	ಸಂಜೀವಯ್ಯ
16)	180	1-00	ಶೀಲಾವತಿ	ಲಕ್ಷ್ಮಣರಾವ್
17)	180	1-00	ಮುನಿರಾಮ ಬೋವಿ	ಯಲ್ಲಾ ಬೋದಿ

ಬೆಂಗಳೂರು ದಕ್ಷಿಣ ತಾಲ್ಲೂಕು ಕೆಂಗೇರಿ ಹೋಬಳಿ ಹೆಮ್ಮಿಗೆ ಪುರ ಸರ್ವೆ ನಂ. 89ರಲ್ಲಿನ ಜಮೀನು ಒತ್ತುವರಿ

177 (659) ಶ್ರೀ ಆರ್. ಅಶೋಕ್ (ಉತ್ತರಹಳ್ಳಿ) : ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬೆಂಗಳೂರು ದಕ್ಷಿಣ ತಾಲ್ಲೂಕು ಕೆಂಗೇರಿ ಹೋಬಳಿ ಹೆಮ್ಮಿಗೆಮರ ಸರ್ವೆ ನ. 89 ಮತ್ತು ಗಾಣಕಲ್ಲು ಸರ್ವೆ ನಂ. 14ರಲ್ಲಿ ಸರ್ಕಾರಕ್ಕೆ ಸೇರಿದ ಎಷ್ಟು ಎಕರೆ ಜಮೀನು ಇವೆ;

ಆ) ಈ ಜಮೀನನ್ನು ಒತ್ತುವರಿ ಮಾಡಿಕೊಂಡು ಕಟ್ಟಡ, ಕಾಂಪೌಂಡ್ ಮತ್ತು ನೀರಾವರಿಗೆ ಅಕ್ರಮವಾಗಿ ಉಪಯೋಗಿಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಇ) ಇದ್ದಲ್ಲಿ ಒತ್ತುವರಿಯಾಗಿರುವ ಜಮೀನನ್ನು ತೆರವುಗೊಳಿಸಲು ಸರ್ಕಾರ ತೆಗೆದುಕೊಂಡ ಕ್ರಮಗಳೇನು?

ಶ್ರೀ ಹೆಚ್.ಸಿ. ಶ್ರೀಕಂಠಯ್ಯ (ಕಂದಾಯ ಸಚಿವರು)

ಅ) 1) ಹೆಮ್ಮಿಗೆಮರ ಗ್ರಾಮದ ಸ.ನಂ. 89ರಲ್ಲಿ ವಸತಿ ದಾಖಲೆಯಂತೆ 50.07ಎಕರೆ ಖಿರಾಬು ಜಮೀನಾಗಿರುತ್ತದೆ.

2) ಗಾಣಕಲ್ಲು ಗ್ರಾಮದ ಸ.ನಂ. 14ರಲ್ಲಿ ಪಹಣಿ ದಾಖಲೆಯಂತೆ 45.30 ಎಕರೆ ಮುಫತೆ ಕಾವಲು ಜಮೀನಾಗಿರುತ್ತದೆ.

ಆ) ಹೌದು.

ಇ) ಹೆಮ್ಮಿಗೆಮರ ಗ್ರಾಮದ ಸ.ನಂ. 89 ರಲ್ಲಿನ ಜಮೀನನ್ನು ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರವು ಬನಶಂಕರಿ 6ನೇ ಹಂತ ಬಡಾವಣೆಗಾಗಿ ಭೂ ಸ್ವಾಧೀನ ಮಾಡಿಕೊಂಡು ಜಮೀನಿನಲ್ಲಿ ರಸ್ತೆ ವಗೈರೆ ನಿರ್ಮಿಸಿರುವುದರಿಂದ ಒತ್ತುವರಿಯಿಂದ ತೆರವುಗೊಳಿಸುವ ಪ್ರಮೇಯ ಉದ್ಭವಿಸಿರುವುದಿಲ್ಲ.

2) ಗಾಣಕಲ್ಲು ಗ್ರಾಮದ ಸ.ನಂ. 14ರ ಜಮೀನಿನಲ್ಲಿ ಮಂಜೂರಾತಿಯಾಗಿ ಉಳಿದಿರುವ ಜಮೀನಿನಲ್ಲಿನ 15-00 ಎಕರೆ ವಿಸ್ತೀರ್ಣದ ಪ್ರದೇಶದಲ್ಲಿ ಅಕ್ರಮವಾಗಿ ನಿರ್ಮಿಸಲಾಗಿರುವ ಗುಡಿಸಲುಗಳನ್ನು ಸಕ್ರಮಗೊಳಿಸಲು ಕೋರಿ 1964 ಕರ್ನಾಟಕ ಭೂ ಕಂದಾಯ ಅಧಿನಿಯಮದ ಕಲಂ 94 (ಸಿ) ಅಡಿಯಲ್ಲಿ ರಚಿಸಲಾಗಿರುವ ನಿಯಮಗಳಡಿಯಲ್ಲಿ ಅರ್ಜಿ ಸಲ್ಲಿಸಿರುತ್ತಾರೆ. ಈ ಅರ್ಜಿಗಳನ್ನು ನಿಯಮಾನುಸಾರ ಪರಿಶೀಲಿಸಿ ಸಕ್ರಮಗೊಳಿಸಲು ಅವಕಾಶವಿಲ್ಲದ ಪ್ರಕರಣಗಳಲ್ಲಿ ತೆರವುಗೊಳಿಸಲು ಕ್ರಮ ಜರುಗಿಸಲಾಗುವುದು.

ಉತ್ತರ ಕರ್ನಾಟಕದಲ್ಲಿರುವ ಕೃಷಿ ಕ್ಯಾಂಪುಗಳನ್ನು ರೆವಿನ್ಯೂ ಗ್ರಾಮಗಳನ್ನಾಗಿ ಪರಿವರ್ತಿಸುವುದು.

218 (288) ಶ್ರೀ ಕಟ್ಟಾ ಸುಬ್ರಮಣ್ಯ ನಾಯ್ಡು (ಶಿವಾಜಿನಗರ) : ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಉತ್ತರ ಕರ್ನಾಟಕದ ಭಾಗಗಳಲ್ಲಿರುವ ಒಟ್ಟು ಕೃಷಿ ಕ್ಯಾಂಪುಗಳೆಷ್ಟು;

ಆ) ಈ ಕ್ಯಾಂಪುಗಳಲ್ಲಿರುವ ಜನಸಂಖ್ಯೆ ಎಷ್ಟು;

ಇ) ಈ ಕೃಷಿ ಕ್ಯಾಂಪ್‌ಗಳನ್ನು ರೆವಿನ್ಯೂ ಗ್ರಾಮಗಳನ್ನಾಗಿ ಪರಿವರ್ತಿಸಬೇಕೆಂದು ಸರ್ಕಾರಕ್ಕೆ ಮನವಿಗಳು ಬಂದಿದೆಯೇ;

ಈ) ಹಾಗಿದ್ದಲ್ಲಿ, ಈ ಕೃಷಿ ಕ್ಯಾಂಪ್‌ಗಳನ್ನು ರೆವಿನ್ಯೂ ಗ್ರಾಮಗಳನ್ನಾಗಿ ಪರಿವರ್ತಿಸಲು ಸರ್ಕಾರ ಕ್ರಮ ಕೈಗೊಳ್ಳತ್ತದೆಯೇ?

ಶ್ರೀ ಹೆಚ್.ಸಿ. ಶ್ರೀ ಕಂಠಯ್ಯ (ಕಂದಾಯ ಸಚಿವರು)

ಅ) ಉತ್ತರ ಕರ್ನಾಟಕದ ಭಾಗಗಳಲ್ಲಿರುವ ಒಟ್ಟು ಕೃಷಿ ಕ್ಯಾಂಪುಗಳ ಸಂಖ್ಯೆ 316

ಆ) ಒಟ್ಟು ಜನಸಂಖ್ಯೆ 1,66,763

ಇ) ಈ ಬಗ್ಗೆ ಕರ್ನಾಟಕ ತಮ್ಮ ಸಂಘದಿಂದ ಮಾತ್ರ ಒಂದು ಮನವಿ ಬಂದಿರುತ್ತದೆ.

ಈ) ಜಿಲ್ಲಾಧಿಕಾರಿಗಳಿಂದ ವರದಿ ಬಂದ ನಂತರ ಪರಿಶೀಲಿಸಲಾಗುವುದು.

Conversion of Agricultural Camps into Revenue village in Uttar Karnataka Areas

288 Sri Katta Subramanya Naidu (Shivajinagar) - (Revenue Minister)

A) How many Agriculture Camps are there in Uttar Karnataka Areas.

B) How much population is there in these camps?

C) Whether any representations have been received for conversion of Agricultures camps into Revenue Villages.